**ಸಾಕ್ಷಿಗೆ ದಿನಾಂಕ: 24.09.2024 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾರ್ಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ RDB ರವರಿಂದ:**

ನಾನು ಬಿ ಇ ಸಿವಿಲ್ ಪದವಿದರ. ನಾನು ಈಗ ಅಸಿಸ್ಟಂಟ ಎಕ್ಸಿಕ್ಯೂಟೀವ್ ಇಂಜಿನಿಯರ್ ಅಂತಾ ಕೆಲಸ ಮಾಡುತ್ತೇನೆ. ನಾನು ಈಗ ಸೇವೆಗೆ ಸೇರಿ 11 ವರ್ಷ ಆಯಿತು. ನಾನು ಬೆಳಗಾವಿ ವಿಭಾಗದಲ್ಲಿ 2021 ರಿಂದು ಮೇಲೆ ಹೇಳಿದ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಈ ದಾವೆಯಲ್ಲಿ ಹೂಡಿರುವ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ಪ್ರತಿವಾದ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ. ಪ್ರತಿವಾದ ಪತ್ರಕ್ಕೆ ನಾನು ಹಾಗೂ ನಮ್ಮ ಇಲಾಖೆಯ ಇನ್ನ ಕೆಲವು ಸಿಬ್ಬಂದಿಗಳು ಸೇರಿ ಮಾಹಿತಿ ನೀಡಿರುತ್ತೇವೆ. ಈ ದಾವೆಯಲ್ಲಿ ನಮ್ಮ ಪರವಾಗಿ ಒಟ್ಟು 18 ದಾಖಲೆಗಳನ್ನು ಹಾಜರು ಪಡಿಸಿರುತ್ತೇವೆ. ಸದರಿ 18 ದಾಖಲೆಗಳನ್ನು ನಾನು ನೋಡಿ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯು ಕಿತ್ತೂರಿನಲ್ಲಿ ಹೊಸದಾಗಿ ನಿರ್ಮಾಣವಾದ ತಾಲೂಕ ಕಛೇರಿ ಕಟ್ಟಡದ ಹಿಂದೆ ಬರುತ್ತದೆ. ನಾನು ನಮ್ಮ ದಾವಾ ಆಸ್ತಿಯನ್ನು ನೋಡಿರುತ್ತೇನೆ ಆದರೆ ವಾದಿಯ ಆಸ್ತಿಯನ್ನು ನೋಡುವ ಅವಶ್ಯಕತೆ ನಮಗೆ ಇರುವುದಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಸರ್ವೆ ನಂ. 86, ಪೂರ್ವಕ್ಕೆ ಸರ್ವೆ ನಂ. 52, ಪಶ್ಚಿಮಕ್ಕೆ ಹೊಸ ತಾಲೂಕಾ

ಕಛೇರಿ ಹಾಗೂ ದಕ್ಷಿಣಕ್ಕೆ ರಸ್ತೆ ಹಾಗೂ ನ್ಯಾಯಾಲಯದ ಆಸ್ತಿ ಇರುತ್ತದೆ. ನಮಗೆ ಸರ್ಕಾರದಿಂದ ಸರ್ವೆ ನಂ. 87 ರಲ್ಲಿ ಜಾಗ ಮಂಜೂರು ಆಗಿರುತ್ತದೆ. ಸರ್ವೆ ನಂ. 87 ರ ಉತಾರವನ್ನು ನಾನು ನೋಡಿರುತ್ತೇನೆ. ಸದರಿ ಸರ್ವೆ ನಂ. 87 ಇದು ಒಟ್ಟು 19 ಎಕರೆ ಇದ್ದು ಅದರ ಪೈಕಿ 4 ಎಕರೆ ನಮ್ಮ ಇಲಾಖೆಗೆ ಮಂಜೂರು ಆಗಿರುತ್ತದೆ. ಸರ್ವೆ ನಂ. 87 ರ ಪಶ್ಚಿಮಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ರಸ್ತೆಯ ಅಗಲೀಕರಣಕ್ಕೆಂದು 3 ಬಾರಿ  ಒಟ್ಟು 3 ಎಕರೆಗಿಂತ ಹೆಚ್ಚಿನ ಜಾಗವನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ. 87/ಎ ರ ಉತಾರವನ್ನು ನಾನು ನೋಡಿರುತ್ತೇನೆ. ಸದರಿ ಸರ್ವೆ ನಂ. 87/ಎ ರ ಒಟ್ಟು ಕ್ಷೇತ್ರ 4 ಎಕರೆ ಇರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ADLR ಕಛೇರಿಯಿಂದ ಸರ್ವೆ ಮಾಡಿಸಿ ಪಿಟಿ ಶೀಟ್ ತಯಾರಿಸಿದ್ದೀರಾ ಎಂದರೆ ಸಾಕ್ಷಿಯು ಸರ್ವೆ ಮಾಡಿಸಿ ಪಿಟಿ ಶೀಟ್ ತಯಾರಿಸಲಾಗಿದೆ ಆದರೆ ಯಾವ ಕಛೇರಿಯಿಂದ ತಯಾರಿಸಿರುತ್ತದೆ ನನಗೆ ಈಗ ನೆನಪಿಲ್ಲ ಎಂದು ಹೇಳುತ್ತಾರೆ. ನಾವು ಸರ್ವೆ ಮಾಡಿಸದೇ ಇದ್ದರೂ ಸರ್ವೆ ಮಾಡಿಸಿ ಪಿಟಿ ಶೀಟ್ ತಯಾರಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ತಹಶೀಲ್ದಾರವರ ಕಡೆಯಿಂದ ಸರ್ವೆ ಮಾಡಿಸಿ ಪಿಟಿ ಶೀಟನ್ನು 2020-21 ನೇ ಸಾಲನಲ್ಲಿ ತಯಾರಿಸಿರುತ್ತೇವೆ. ಸದರಿ ದಾಖಲೆಯನ್ನು ನಿಡಿ 21 ರಂತೆ ಗುರುತು ಮಾಡಲಾಗಿರುತ್ತದೆ ಎಂದರೆ ನಿಜ.  ನಿಡಿ 21 ರಲ್ಲಿ ವಾದಿಯ ಆಸ್ತಿಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ

ನಿಜ. ಸಾಮಾನ್ಯವಾಗಿ ಒಂದು ಆಸ್ತಿಯು ಮಂಜೂರು ಆಗಬೇಕೆಂದರೆ ಅದಕ್ಕಿಂತ ಪೂರ್ವದಲ್ಲಿ 11ಇ ನಕಾಶೆ ತಯಾರಿಸಿದ ನಂತರ ಮಂಜೂರು ಆಗುತ್ತದೆ ಎಂದರೆ ಸಾಕ್ಷಿಯು ಸರ್ಕಾರದಿಂದ ಅಥವಾ ಜಿಲ್ಲಾಧಿಕಾರಿಗಳಿಂದ ಮಂಜೂರು ಆಗಿದ್ದರೆ 11ಇ ನಕಾಶೆ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. 1ನೇ ಪ್ರತಿವಾದಿಯು ಸಹ ಸರ್ವೆ ನಂ. 87/ಎ ಗೆ ಸಂಬಂಧಿಸಿದಂತೆ ಯಾವುದೇ 11ಇ ನಕಾಶೆಯನ್ನು ನಮಗೆ ನೀಡಿರುವುದಿಲ್ಲ. 1ನೇ ಪ್ರತಿವಾದಿಯೂ ಕಾನೂನುಬದ್ದವಾಗಿ ಕಡ್ಡಾಯವಾಗಿ 11ಇ ನಕಾಶೆಯನ್ನು ಮಾಡಿದ ನಂತರ ನಮಗೆ ಸದರಿ ಜಮೀನನ್ನು ಮಂಜೂರು ಮಾಡಬೇಕಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ನಮಗೆ 4 ಎಕರೆ ಜಮೀನನ್ನು ಮಂಜೂರು ಮಾಡುವ ಸಮಯದಲ್ಲಿ ನಮ್ಮ ಇಲಾಖೆಯಲ್ಲಿರುವ ಕಾನೂನು ಸಲಹೆಗಾರರು ಎಲ್ಲಾ ಮಾಹಿತಿಗಳನ್ನು ಪರೀಶೀಲಿಸಿ ತಮ್ಮ ಅಭೀಪ್ರಾಯವನ್ನು ಸಲ್ಲಿಸಿರುತ್ತಾರೆ. ಸದರಿ ಅಭೀಪ್ರಾಯವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಅಭೀಪ್ರಾಯವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

1ನೇ ಪ್ರತಿವಾದಿಯು 4 ಎಕರೆ ಜಮೀನು ನಮಗೆ ಮಂಜೂರು ಮಾಡುವ ಪೂರ್ವದಲ್ಲಿ ಸದರಿ ಜಮೀನನ ಅಕ್ಕಪಕ್ಕದ ಮಾಲೀಕರ ತಕರಾರು ಇರುವ ಕುರಿತು ಪತ್ರಿಕಾ ಪ್ರಕಟನೆಯನ್ನು ಹೊರಡಿಸಿರುವುದಿಲ್ಲ.

ದಿಃ 15.03.2021 ರಂದು ಕಿತ್ತೂರು ಪಟ್ಟಣ ಪಂಚಾಯತಿಯವರು

ನಿಡಿ 8 ರಂತೆ ನಮಗೆ ಒಂದು ಪತ್ರವನ್ನು ನೀಡಿರುತ್ತಾರೆ ಎಂದರೆ ನಿಜ. ನಿಡಿ 8 ರಲ್ಲಿ ಪಟ್ಟಣ ಪಂಚಾಯತಿಯವರು ಸರ್ವೆ ನಂ. 87 ರಲ್ಲಿ ದಾವಾ ಆಸ್ತಿಗಳು ಬರುವುದಿಲ್ಲ ಎಂದು ಬರೆದಿರುತ್ತಾರೆ ಎಂದರೆ ನಿಜ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ, ಆಲಿಸಿ ಸಮಯ ನೀಡಿ ಮುಂದೂಡಲಾಯಿತು.**

( ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**